**ಓ ಎಸ್ ನಂಬರ್ಃ 220/2022**

ಪಿಡಬ್ಲ್ಯು –1

**ದಿನಾಂಕ 14-07-2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲುಃ 1, 3 ಮತ್ತು 4 ನೇ ಪ್ರತಿವಾದಿ ಪರವಾಗಿ ಶ್ರೀ. ಆರ್ ಐ ಎಸ್ ವಕೀಲರಿಂದ**

1. ಈ ದಾವೆಯನ್ನು ನಾನು ಜಾಗದ ಸಲುವಾಗಿ ಹಾಕಿರುತ್ತೇನೆ. ದಾವಾ ಆಸ್ತಿಯ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಚೆಕ್ ಬಂದಿ ಇರುತ್ತದೆ ಮತ್ತು ಅದರ ನಕಾಶೆಯನ್ನು ನಾನು ಹಾಜರು ಪಡಿಸಿರುತ್ತೇನೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಪಶ್ಚಿಮ ಭಾಗಕ್ಕೆ ಇರುವ ಖುಲ್ಲಾ ಜಾಗದ ನಕಾಶೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಖುಲ್ಲಾ ಜಾಗಕ್ಕೆ ಸಂಬಂಧಿಸಿದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಆ ಖುಲ್ಲಾ ಜಾಗದ ಪಂಚಾಯಿತಿ ನಂಬರ್ ನನಗೆ ಹೇಳಲು ಬರುವುದಿಲ್ಲ. ದಿಃ20–03–2022 ರಂದು ಪ್ರತಿವಾದಿಯರು ನನ್ನ ಕಬ್ಜಾಕ್ಕೆ ತಕರಾರು ಮಾಡಿರುತ್ತಾರೆ ಎಂದು ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಆ ಅರ್ಜಿಯ ಪ್ರತಿಯನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ಪಂಚಾಯಿತಿಯವರು ನನಗೆ ನ್ಯಾಯಾಲಯಕ್ಕೆ ಹೋಗಲು ಹೇಳಿ ಉತ್ತರವನ್ನು ಮೌಖಿಕವಾಗಿ ಕೊಟ್ಟಿರುತ್ತಾರೆ. ಪಂಚಾಯಿಯತಿಯಲ್ಲಿ ಚೇರ್ ಮನ್ ರು ಮತ್ತು ಇತರರು ನ್ಯಾಯ ಬಗೆ ಹರಿಯುವುದಿಲ್ಲ, ಕೋರ್ಟಗೆ ಹೋಗಲು ಅವರು ನನಗೆ ತಿಳಿಸಿದ್ದರು.

2. ನಾನು ಇರುವ ಜಾಗದ ಕ್ಷೇತ್ರವು ಮೂರು ಪ್ಲಾಟ್ ಗಳಷ್ಟು ಇರುತ್ತದೆ. ನನಗೆ ನೂರು ವರ್ಷಗಳ ಹಿಂದೆ ಮೂರು ಪ್ಲಾಟ್ ಗಳು ಬಂದಿರುತ್ತವೆ. ಆ ಮೂರು ಪ್ಲಾಟ್ ನ ನಂಬರ್ ಏನು ಇರುತ್ತದೆ ಎಂದರೆ ಅವುಗಳಿಗೆ ನಂಬರ್ ಕೊಟ್ಟಿರುವುದಿಲ್ಲ. ಆ ಪ್ಲಾಟ್ ಗಳಲ್ಲಿ ಸರ್ಕಾರದವರೇ ಮನೆಯನ್ನು ಕಟ್ಟಿದ್ದರು. ನಾನಾಗೇ ಅಲ್ಲಿ ಮನೆಯನ್ನು ಕಟ್ಟಿರುವುದಿಲ್ಲ. ನನಗೆ ಇಂದಿರಾ ಯೋಜನೆಯಡಿಯಲ್ಲಿ ಮೂರು ಪ್ಲಾಟ್ ಗಳು ಬಂದಿದ್ದವು. ಮೂರು ಪ್ಲಾಟ್ ಗಳು

ಒಂದೇ ಕಡೆ ಇರುತ್ತವೆ. ಆ ಪ್ಲಾಟ್ ನಲ್ಲಿ ಕಟ್ಟಿಸಿದ ಹಂಚಿನ ಮೂರು ಮನೆಗಳು ಬಿದ್ದಾಗ ಮತ್ತು ಪುನಃ ಮನೆಯನ್ನು ಕಟ್ಟಿಸಿರುತ್ತೇನೆ. ಸರ್ಕಾರದಿಂದ ರೂ.20,000/- ಹಣವನ್ನು ಪಡೆದು ಆರ್ ಸಿ ಸಿ ಕಟ್ಟಡವನ್ನು ಕಟ್ಟಿರುತ್ತೇನೆ. ಸರ್ಕಾರದಿಂದ ರೂ.20,000/- ಮಂಜೂರು ಆಗಿರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಮೊದಲು ಇಪ್ಪತ್ತು ಸಾವಿರ ನಂತರ ಎಪ್ಪತ್ತೈದು ಸಾವಿರ ಬಂದಿತು. ಎಪ್ಪತ್ತೈದು ಸಾವಿರ ಹಣ ಕೊಟ್ಟಿರುತ್ತಾರೆ ಎಂದು ಪಾವತಿಯನ್ನು ನಾನು ಹಾಜರು ಪಡಿಸಿರುತ್ತೇನೆ. ನನಗೆ ಪಡ ಜಾಗವನ್ನು ಕೊಟ್ಟಿದ್ದರು. ಗ್ರಾಮ ಪಂಚಾಯಿತಿಯ ಆಸ್ತಿಯ ಅದರದೇ ಆದ ಉತಾರ ಇರುತ್ತದೆ ಎಂದರೆ ಸರಿ. ಅಮ್ಮಿನಬಾವಿ ಪಂಚಾಯಿತಿಯ ಆಸ್ತಿ ನಂ.1251 ರಲ್ಲಿ ಯಲ್ಲಪ್ಪ, ಮಹಾದೇವಿ ಮತ್ತು ಇತರರ ಹೆಸರಿನಲ್ಲಿ ಖಾತಾ ನಕಲು ಇರುತ್ತದೆ ಎಂದರೆ ನನ್ನದು 53/1 ಆಸ್ತಿ ಇರುತ್ತದೆ. ಪಂಚಾಯಿತಿಯವರು ಯಲ್ಲವ್ವ ತಂದೆ ಕಲ್ಲಪ್ಪ ಬಂಗೇನವರ, ಮಹಾದೇವಿ ಬಂಗೇನವರ್ ಮತ್ತು ಇತರರ ಕಡೆಯಿಂದ ಆಸ್ತಿ ತೆರಿಗೆಯನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ಮುಸಲ್ಮಾನರಿಗೆ ಕೊಟ್ಟ ಆಸ್ತಿ ನಂಬರ್ 1251 ಕ್ಕೂ ಮತ್ತು ನನ್ನ ಆಸ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಆಸ್ತಿ ಮತ್ತು ನಮ್ಮ ಆಸ್ತಿ ಬೇರೆ ಬೇರೆ ಇರುತ್ತದೆ ಎಂದು ಹೇಳುತ್ತಾರೆ. ನಮ್ಮ ಆಸ್ತಿಯ ಒಳಗೆ ನಾವೇ ಇರುತ್ತೇವೆ ಎಂದರೆ ಸರಿ. ಆ ಆಸ್ತಿಯು ನನಗೆ ಸರ್ಕಾರದಿಂದ ಬಂದ ಆಸ್ತಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯವರಿಗೆ ಬಂದ ಆಸ್ತಿಯನ್ನು ನನಗೆ ಬಳಸಬೇಡ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ನನ್ನ ಜಾಗ ಕೊಡಲು ಕೇಳುತ್ತಿದ್ದಾರೆ, ಅದನ್ನು ನಾನೇಕೆ ಕೊಡಲಿ ಎಂದು ನುಡಿದಿರುತ್ತಾರೆ. ಯಲ್ಲವ್ವ, ಮಾದೇವಿ ಮತ್ತು ಮಂಜುಳಾ ಕಾಂಬಳೆಯವರು ನನಗೆ ಸಂಬಂಧಿಕರಾಗುತ್ತಾರೆ ಎಂದರೆ ಸರಿ. ಯಲ್ಲವ್ವ ಈಗ ತೀರಿಕೊಂಡಿರುತ್ತಾಳೆ. ನನ್ನ ತಾಯಿ ಶೆಟ್ಟೆವ್ವ ತೀರಿಕೊಂಡಿರುತ್ತಾಳೆ. ಆ ಮೂರು ಪ್ಲಾಟ್ ಗಳು ನನ್ನದು ಇರುತ್ತವೆ ಎಂದು ತೋರಿಸಲು ಸಂಬಂಧ ಪಟ್ಟ ಕಾಗದಗಳನ್ನು ನಾನು ಹಾಜರು ಪಡಿಸಿರುತ್ತೇನೆ. ಯಲ್ಲವ್ವ ತಂದೆ ಕಲ್ಲಪ್ಪ ಬಂಗ್ಯಾನವರ, ಮಹಾದೇವಿ ಗಂಡ ಫಕ್ಕೀರಪ್ಪ ಬಂಗ್ಯಾನವರ, ಮಂಜುಳಾ ಗಂಡ ಶಂಕರ್ ಕಾಂಬಳೆ, ಮಲ್ಲಿಕಾರ್ಜುನ, ವಸಂತ, ರಾಘವೇಂದ್ರ

ಅವರಿಗೆ ಬರತಕ್ಕಂತ ಆಸ್ತಿಗೆ ನನಗೆ ಸಂಬಂಧ ಇಲ್ಲ ಎಂದರೆ ಸರಿ. ಆ ಮೂರು ಪ್ಲಾಟ್ ಗಳು ನಾನೇ ಬಳಸುತ್ತೇನೆ ಎಂದು ತೋರಿಸಲು ನನ್ನ ಹತ್ತಿರ ಎಲ್ಲ ಕಾಗದಗಳು ಇರುತ್ತವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಮತ್ತು ಪ್ರತಿವಾದಿ ನಂ. 1 ರಿಂದ 4 ರವರ ಮನೆ ಮತ್ತು ಖುಲ್ಲಾ ಜಾಗಗಳ ನಂಬರ್ ಗಳು ಬೇರೆ ಬೇರೆ ಇರುತ್ತವೆ ಎಂದು ನಾನೇ ಹೇಳಿರುತ್ತೇನೆ ಎಂದರೆ ಸರಿ. ನನಗೆ ಬಂದ ಜಾಗದಲ್ಲಿ ಪ್ರತಿವಾದಿಯವರು ನನಗೆ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಪ್ಲಾಟ್ ನ ಕಬ್ಜೆಯಲ್ಲಿ ನಾನು, ಅವರ ಪ್ಲಾಟ್ ನ ಕಬ್ಜೆಯಲ್ಲಿ ಅವರು ಇರುತ್ತಾರೆ ಎಂದರೆ ಸರಿ. ನಾನು ಪ್ರತಿವಾದಿಯರ ಜೊತೆಗೆ ಉತ್ತಮ ಸಂಬಂಧ ಹೊಂದಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

ಪ್ರಧಾನ **ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**